Doc-473
T-P-2

Reg No B G 155 4 — 5 — 72

55th Year of Publication ★ 'Satyavadi' Daily, Mysore 4

In the State - The First
Golden Jubilee
Celebrated Paper
★
News, Views; Dharmic
Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ
ಸ್ವಾತಂತ್ರ್ಯ
ಮಹೋತ್ಸವ
ವಿದೇಶೀ ವಿನಿಮಯ
ದಕ್ಕಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮಂತ್ರಿಗಳ ಅಧಿಕಾರಿಗಳ ಆಸ್ತಿ - ಸಾಲಗಳ ವಿವರ

ಮಂತ್ರಿಗಳ ಆಸ್ತಿ-ಸಾಲ

ನವದೆಹಲಿ— ಮಂತ್ರಿಗಳು ಅಧಿಕಾರ ವಹಿಸಿಕೊಳ್ಳುವಾಗ ಮತ್ತು ನಂತರ ಮತ್ತು ವರ್ಷಂಪ್ರತಿ ತಮ್ಮ ಆಸ್ತಿ-ಸಾಲಗಳ ವಿವರವನ್ನು ಪ್ರಧಾನಿಯವರಿಗೆ ರಹಸ್ಯವಾಗಿ ಕೊಡುವರೆಂದೂ, ಅದು ಸಾಕಷ್ಟು ಪರೀಕ್ಷೆ ಸಲಾಗುವುದೆಂದೂ, ಈ ಬಗ್ಗೆ ಚರ್ಚಿಸುವುದು ಸೂಕ್ತವಲ್ಲವೆಂದೂ ಪ್ರಧಾನಿ ಇಂದಿರಾರವರು ಲೋಕಸಭೆಯಲ್ಲಿ ತಿಳಿಸಿದರು — ಸರಕಾರಿ ಅಧಿಕಾರಿಗಳು ಕೆಲಸಕ್ಕೆ ಸೇರುವಾಗ ಮತ್ತು ಪ್ರತಿವರ್ಷ ಆ ರೀತಿ ಅಂಕಿ ಅಂಶ ಕೊಡುವರೆಂದೂ, ಇದನ್ನು ಬಹಿರಂಗಪಡಿಸುವುದು ಸರಿಯಲ್ಲವೆಂದೂ ಆ ವ ರು ಹೇಳಿದರು.

★

ಪುರಸಭೆ

ಮೈಸೂರು— ಏಪ್ರಿಲ್ ಮಾಹೆಯ ಮಂದುವರಿಪ ಪುರಸಭಾಧಿವೇಶನವು ತಾ || 9 ಮಂಗಳವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದು.

ರೈತ ಮತ್ತು ಕಾರ್ಮಿಕ ಸೇವಾ ಸಂಘ

ನಂ. 13 ಚಾಮರಾಜಪುರಂ, ಮೈಸೂರು-4

ಮೈಸೂರು ರಾಜ್ಯದಲ್ಲಿ ಜವಾನನ ಕೆಲಸ ಮಾಡುವವನಿಗೆ ಸುಮಾರು ರೂ. 180 ತಿಂಗಳಿಗೆ ದೊರೆಯುತ್ತದೆ. ಅಧಿಕಾರಿಗಳಿಗೆ ಸುಮಾರು ರೂ. 3000 ತಿಂಗಳಿಗೆ ದೊರೆಯುತ್ತದೆ. ವೇತನದಲ್ಲಿ ಇಷ್ಟು ಅಂತರವಿದ್ದರೂ, ಸ್ಥಾಮಾನ್ಯವಾಗಿ ಹೊಟ್ಟೆ ತುಂಬಲು ಖರ್ಚುವೆಚ್ಚಗಳು ಇಬ್ಬರಿಗೂ ಒಂದೇ ಇರುತ್ತದೆ. ಈ ಕಾರಣದಿಂದ ಜವಾನನಿಗೂ ಹೆಚ್ಚು ವೇತನ ಕೊಡಬೇಕಾದುದು ಸಾಮಾಜಿಕ ನ್ಯಾಯ. ಆದರೆ ಸರ್ಕಾರ ಈ ರೀತಿ ಕೊಡಲು ಸಾಧ್ಯವೇ? ಇದು ಸಾಧ್ಯವಿಲ್ಲವೆಂದಾಗ ಭೂವಿಯಲ್ಲಿ ಜೀವನ ಮಾಡುವ ರೈತನಿಗೆ ಮಿತಿ ಏಕೆ ಹಾಕಬೇಕು? ಈ ದೃಷ್ಟಿಯಿಂದ ಭೂ ಸುಧಾರಣೆ ಕಾನೂನು ತರುವುದೇ ತಪ್ಪು ಎಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜಂಬೂಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ ರೈತ ಮತ್ತು ಕಾರ್ಮಿಕ ಸೇವಾಸಂಘದ ಕಾರ್ಯಕಾರಿ ಸಮಿತಿ ಭೂ ಸಮಸ್ಯೆಯನ್ನು ಕೂಲಂಕುಶವಾಗಿ ಪರಿಶೀಲಿಸಿ, ನಿರ್ಣಯವನ್ನು ಅಂಗೀಕರಿಸಿ, ಭೂ ಪಾಲೀಕರಣಕ್ಕೆ ಬೇಷರತ್ ಭೂಮಿಯನ್ನು ಕೊಡಿಸಿ ಅವನಿಗೆ ಕಷ್ಟನಷ್ಟಗಳುಂಟಾಗಿರುವುದನ್ನು ತಪ್ಪಿಸಬೇಕೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಕೇಂದ್ರ ರೈಲ್ವೆ ಮಂತ್ರಿ ಶ್ರೀ ಕೆ. ಹನುಮಂತಯ್ಯ, ಮೈಸೂರು ಮುಖ್ಯಮಂತ್ರಿ, ಶ್ರೀ ಡಿ ದೇವರಾಜ ಅರಸು, ಕಂದಾಯಮಂತ್ರಿ ಶ್ರೀ ಹುಚ್ಚುಮಾಸ್ತಿಗೌಡ ಮತ್ತು ಕೈಗಾರಿಕೆ ಮಂತ್ರಿ ಶ್ರೀ ಎಸ್ ಎಂ ಕೃಷ್ಣ ಅವರನ್ನು ಒತ್ತಾಯ ಪೂರ್ವಕವಾಗಿ ಸ್ವಾರ್ಥಿಸುತ್ತದೆ.

ಸಮಿತಿ ಮತ್ತೊಂದು ನಿರ್ಣಯ ಅಂಗೀಕರಿಸಿ, ಮನೆ ತೆರಿಗೆ ಮೈಸೂರು ನಗರದಲ್ಲಿ ಈಗಾಗಲೇ ವಿಪರೀತ ಹೆಚ್ಚಾಗಿರುವುದರಿಂದ ಕಂದಾಯ ಪುನರ್ವಿಮರ್ಶೆಯನ್ನು ಕೈಬಿಡುವಂತೆ ಸರ್ಕಾರವನ್ನು ಒತ್ತಾಯ ಮಾಡಿದೆ.

ಸುಳ್ಳು ಹೇಳುವುದು ಅಪರಾಧ

ವಾಷಿಂಗ್ಟನ್— ಅಧಿಕಾರಿಗಳು ಸುಳ್ಳು ಹೇಳುವುದು ಅಪರಾಧವೆಂದು ಮಾಡುವಂತೆ ಕಾಂಗ್ರೆಸ್ಸನ್ನು ವುಲಿಟ್ಜರ್ ಪಾರಿತೋಷಕ ಪಡೆದ ಜಾಕ್ ಆಂಡರ್ಸನ್ ಒತ್ತಾಯ ಮಾಡಿರುವರು — ತಿನ್ನೀರಿಕಾ ಸರಕಾರ ಸತ್ಯವಂತವಾಗಿದ್ದರೆ ಕತೆಗಳು ಹುಟ್ಟುತ್ತಿರಲಿಲ್ಲವೆಂದೂ ಹೇಳಿದರು

★

ಆಟೋರಿಕ್ಷಾ ಓಡಾಟ ನಿಂತಿದೆ

ಕೊಯಮತ್ತೂರು— ಆಟೋರಿಕ್ಷಾಗಳಿಗೆ ಹೊಸ ಪರ್ಮಿಟ್ ಕೊಡುವದನ್ನು ಪ್ರತಿಭಟಿಸಿ ಡ್ರೈವರುಗಳು ಮುಷ್ಕರ ರುಗಳು ವುಷ್ಕರ ಹೂಡಿರುವದರಿಂದ, ಏಪ್ರಿಲ್ 30 ರಿಂದ ಇಲ್ಲಿಯ 950 ರಿಕ್ಷಾಗಳ ಓಡಾಟ ನಿಂತಿದೆ.

○

ಅಕ್ಕಿಗೂ ಮಾರಿ

ಬೆಂಗಳೂರು— ಗೋಧಿ ಮತ್ತು ಧಾನ್ಯಗಳು ಮಾತ್ರವಲ್ಲದೆ ಅಕ್ಕಿಯನ್ನೂ ಬಹಿರಂಗ ಮಾರುಕಟ್ಟೆಯಲ್ಲಿ ಮಾರುವಂತೆ ಫುಡ್ ಕಾರ್ಪೊರೇಷನ್ನಿಗೆ ಆಹಾರ ಸ್ಟೇಟ್ ಮಂತ್ರಿ ಶ್ರೀಮತಿ ಈವಾ ವಾಜ್ ಸಲಹೆ ಮಾಡಿದರು.

●

ಸಂಜುಬೆಳಕಿನ ಮೆರವಣಿಗೆ

ಮೈಸೂರು— ಮಹಾಜನ ಕಾಮಿಷನರವರಿಯನ್ನು ಜಾರಿಗೆ ತರುವ ವಿಷಯದಲ್ಲಿ ಕೇಂದ್ರದ ಅಲಕ್ಷ್ಯತೆಯನ್ನು ಪ್ರಭಟಿಸಿ, ಕನ್ನಡ ಚಳುವಳಿಗಾರರು ತಾ || 13 ರಂದು ಸಂಜುವೀಸದ ಮೆರವಣಿಗೆ ಸಡೆಸರುವರು — ರಾಜ್ಯಾದ್ಯಂತ ಚಳವಳಿ ಹೂಡಲಾಗುವುದೆಂದು ಶ್ರೀ ವಾಟಾಳ್ ನಾಗರಾಜ್‌ರು ಹೇಳಿರುವರು.

★

ಯುದ್ಧವಿಲ್ಲದ ಒಪ್ಪಂದ

ನವದೆಹಲಿ— ಭಾರತದೊಡನೆ 'ಯುದ್ಧ ವಿಲ್ಲದ' ಸಾಂಪ್ರದಾಯಿಕ ಒಪ್ಪಂದದ ಮಾತಿಲ್ಲವೆಂದು ಅಧ್ಯಕ್ಷ ಭುಟ್ಟೋ ಹೇಳಿದರು — ಇದು ಕೇವಲ ನಂಬಿಕೆ ಹುಟ್ಟುನ್ಮಾತುಗಳನ್ನು ಲೆಕ್ಕಿಸತಕ್ಕದ್ದಲ್ಲವೆಂದಿರುವರುವರು — ಪಾಕಿಸ್ತಾನ ಭಾರತದೊಂದಿಗೆ ಮತ್ತೊಂದು ಯುದ್ಧಕ್ಕೆ ಹೋಗುವದಿಲ್ಲವೆಂದು ತಾವು ಆಗ್ರಲೇ ತಿಳಿಸಿರುವುದಾಗಿ ಹೇಳಿದರು — ಇವು ರಾವಲ್ಪಿಂಡಿಯಲ್ಲಿ ನಡೆದುದಾಗಿ ವರದಿಯಾಗಿದೆ.

★

ಚಲನಚಿತ್ರ ಸಹಾಯದ್ರವ್ಯ

ಬೆಂಗಳೂರು — ಚಲನಚಿತ್ರಗಳಿಗೆ ಸಹಾಯಧನ ಕೊಡುವ ವಿಷಯವು ಚಿತ್ರಗಳ ಯೋಗ್ಯತೆಗೆ ಗಂಟುಹಾಕಬಾರದೆಂಬ ಕೇಳಿಕೆಯನ್ನು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ತಿರಸ್ಕರಿಸಿದರು — ಸರಕಾರದ ಈ 50000 ರೂ. ಗಳ ಸಹಾಯಧನಕ್ಕಾಗಿಯೇ ಹಲವರು ಚಲನಚಿತ್ರದ ಯೋಗ್ಯತೆ ಲೆಕ್ಕಿಸದೆ ತಯಾರಿಸಲು ಹೊರಟಿರುವುದು ತಮ್ಮ ಮನಸ್ಸಿಗೆ ನೋಂದಿರುವದೆಂದು ಹೇಳಿದರು.

○

ನೆಕ್ಸಲೈಟರ ಕೊಲೆ

ಕಲ್ಕತ್ತಾ— ನದಿಯಾ ಜಿಲ್ಲಾ ಶಾಂತಿಪುರದ ಹತ್ತಿರ ನಾಲ್ವರು ನೆಕ್ಸಲೈಟರನ್ನು ಗುಂಡಿಕ್ಕಿ ಕೊಲ್ಲಲಾಯಿತು

●

ಜನಸಂಘದ ವಿರೋಧ

ಭಾಗಲಪುರ— ಸರಕಾರವು ವಶಪಡಿಸಿಕೊಳ್ಳುವ ಭೂಮಿಗೆ ಮಾರುಕಟ್ಟೆ ಹರದ ಪರಿಹಾರ ನೀಡದಿರುವ ರಾಜ್ಯಾಂಗದ 29 ನೇ ತಿದ್ದುಪಡಿಯನ್ನು ಜನಸಂಘ ವಿರೋಧಿಸುವುದೆಂದು ಅಧ್ಯಕ್ಷ ಶ್ರೀ ಎ ಜಿ ಮವರು ಹೇಳಿದರು.

ಆಸಾರ ಬೆಳ್ಳಿ ವಶ

ಬೊಂಬಾಯಿ— ವೆರಸೋವಾ ರೇವಿನ ಸಮುದ್ರ ತೀರದಲ್ಲಿ ಹೂತಿಟ್ಟಿದ್ದ ರೂ. 11 ಲಕ್ಷ ಬೆಲೆಯ 2040 ಕೆಜಿ ಬೆಳ್ಳಿ ವಶಪಡಿಸಿಕೊಳ್ಳಲಾಯಿತು.

★

ಟೆಲಿಫೋನ್ ಬಿಲ್ಲುಗಳ ಬಾಕಿ

ನವದೆಹಲಿ— ದೇಶದಲ್ಲಿ ಈ ವರ್ಷ ಜನವರಿ 1 ರಂದು ಟೆಲಿಫೋನ್ ಬಿಲ್ಲುಗಳ ಬಾಕಿ ರೂ 582 63 ಲಕ್ಷ ಇದ್ದಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ರೈಲ್ವೇ ಆಕಸ್ಮಿಕಗಳು

ನವದೆಹಲಿ— ಕಳೆದವರ್ಷ 867 ರೈಲ್ವೇ ಆಕಸ್ಮಿಕಗಳಾದವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಕೈಕೊಟ್ಟ ಮುತ್ತು

ಬೈರೂಟ್— ಇಬ್ಬರು ಸುಂದರ ಲೆಬಾನಿ ಹುಡುಗಿಯರು ಒಂದು ಉಡುಪಿನ ಅಂಗಡಿಗೆ ಹೋದರು ; ಒಬ್ಬ ಹುಡುಗ ಮಾಲೀಕನನ್ನು ಆಲ್ಲಿಯ ಒಂದು ಕೊಠಡಿಗೆ ಕರೆದು, ತನಗೆ ಮುತ್ತಿಡಬೇಕೆಂದೂ, ತನ್ನ ಪ್ರೇಮಿಯಾಗಬೇಕೆಂದೂ, ತನ್ನ ಗಂಡ ಒಳ್ಳೇ ಶ್ರೀಮಂತನಾದುದರಿಂದ ವಿಚ್ಛೇದನ ಕೊಡುವನೆಂದೂ ಹೇಳಿ, ತನ್ನ ಟೆಲಿಫೋನಿನ ನಂಬರು ಕೊಟ್ಟಳು ; ನಂತರ ಅವನನ್ನೆ ಚೆನ್ನಾಗಿ ಮುತ್ತು ಕೊಡುತ್ತಿದ್ದಾಗ ಮೆತ್ತಗೆ ಬ್ಯಾಗಿನಲ್ಲಿ ಇಕ್ಕಿದ್ದ ರೂ 3000 ಹಣವನ್ನು ದೋಚಿಕೊಂಡಳು : ನಂತರ ಏನೂ ವ್ಯಾಪಾರ ಮಾತಾಡಿ ಹೊರಟುಹೋದರು : ಮಾಲೀಕನಿಗೆ ಆಮೇಲೆ ಇದು ಗೊತ್ತಾಗಿ ಆ ಹುಡುಗಿ ಕೊಟ್ಟಿದ್ದ ಫೋನ್ ನಂಬರು ನೋಡಲಾಗಿ ಅದು ಹುಚ್ಚಾಸ್ಪತ್ರೆಯದಾಗಿತ್ತು



Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Contribute Liberally

to the National Defence Fund

ವುಡ್‌ಲ್ಯಾಂಡ್ 5 5 72 ರಿಂದ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಹಂಡರಿಬಾಯಿ

ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಪ್ರತಿ ದಿನ ಬೆಳಿಗ್ಗೆ 11 ರಿಂದ 12 ಘಂಟೆವರೆಗೆ ಬಾಲ್ಕನಿ-ತರಗತಿಗಳಿಗೆ ಮುಂಗಡ ಟಿಕೀಟು ಕೊಡಲಾಗುತ್ತೆ.

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಬೆಳ್ಳಿ ಮೋಡ

ಅಪೆರಾ 4 ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್ಥ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

★

SHAKTI

SUDHA

A Superb Tonic

' ಮಾನವನು ಕೇಳು ಸೃಷ್ಟಿಯ ಧಣಿ, ಕ್ರೀಡಾ ಪಶುಗಳು ನೀಡಿನ 'ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅಪಹಾ ಸೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ ಕರ— ಚೊಚ್ಚಲು ಚಿತ್ರ

ಅನು-ಹುಡುಗ

Protect the Cow

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore 4